1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	(255)158
2 ಸದಸ್ಯರ ಹೆಸರು	:	ಶ್ರೀ ಮುನಿಯಪ್ಪ ಎ (ಶಿಡ್ಲಘಟ್ಟ)
3. ಉತ್ತರಿಸುವ ಸಚಿವರು	:	(ಶ್ರೀ ಬಸವರಾಜ್ ಬೊಮ್ಮಾಯಿ) ಜಲಸಂಪನ್ಮೂಲ ಸಚಿವರು

ಅ) ಬಯಲು ಸೀಮೆ ಪ್ರದೇಶಗಳಾದ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ಚಿತ್ರದುರ್ಗ ಮುಂತಾದ ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಬವಣೆ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಕುಡಿಯುವ ನೀರು ಸರಬರಾಜು ಮಾಡುವ ವಿಷಯವು ಜಲ ಸಂಪನ್ಮೂಲ ಇಲಾಖೆಯ ವ್ಯಾಪ್ತಿಯಲ್ಲಿ ಬರುವುದಿಲ್ಲ.

ಆ) ಹಾಗಿದ್ದಲ್ಲಿ, ಕುಡಿಯುವ ನೀರಿನ ಶಾಶ್ವತ ಪರಿಹಾರಕ್ಕೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು;

ಮೇಲಿನ ಉತ್ತರದಂತೆ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಕುಡಿಯುವ ನೀರಿನ ಬವಣೆ ನೀಗಿಸುವ ಸಂಬಂಧ ನೇತ್ರಾವತಿ ನದಿ ನೀರನ್ನು ಒದಗಿಸಲು ಡಾ:ಪರಮಶಿವಯ್ಯನವರ ವರದಿ ಜಾರಿಗೆ ತರುವ ವಿಚಾರ ಸರ್ಕಾರದ ಗಮನದಲ್ಲಿಯೇ;

ನೇತ್ರಾವತಿ ನದಿಯ ನೀರನ್ನು ನೀರಾವರಿ ಮತ್ತು ಕುಡಿಯುವ ನೀರಿನ ಉದ್ದೇಶದ ಕುರಿತು ಪರಮಶಿವಯ್ಯ ಇವರು ನೀಡಿರುವ ವರದಿಯನ್ನು ಜಾರಿಗೆ ತರುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ

ಈ) ಡಾ: ಪರಮಶಿವಯ್ಯನವರ ವರದಿ ಜಾರಿಗೆ ತರುವ ನಿಟ್ಟಿನಲ್ಲಿ ಅಂತರಿಕ್ಷ (Satellite) ಸರ್ವೆ ಕಾರ್ಯ ಯಾವ ಹಂತದಲ್ಲಿದೆ;

ಸದರಿ ಯೋಜನೆಯ ಮಾಲಾ ಕಾಲುವೆಗಳ ವೈಮಾನಿಕ ಸಮೀಕ್ಷೆ ಕಾರ್ಯವು ಪೂರ್ಣಗೊಂಡಿದ್ದು, ಸೇವಾ ಕಾಲುವೆಗಳ ವೈಮಾನಿಕ ಸಮೀಕ್ಷೆ ಕಾರ್ಯವನ್ನು ಕೈಗೊಳ್ಳಬೇಕಾಗಿರುತ್ತದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	(262)160
ಸದಸ್ಯರ ಹೆಸರು	:	ಶ್ರೀ ಪಾಟೀಲ್ ಎ.ಎಸ್(ನದಹಳ್ಳಿ) (ದೇವರ ಹಿಪ್ಪರಗಿ)
ವಿಷಯ	:	ಬಿಜಾಪುರ ಜಿಲ್ಲೆಯನ್ನು ಬರಪೀಡಿತವೆಂದು ಘೋಷಿಸುವ ಬಗ್ಗೆ.
ಉತ್ತರಿಸುವವರು	:	(ಶ್ರೀ ಜಿ.ಕರುಣಾಕರರೆಡ್ಡಿ) ಮಾನ್ಯ ಕಂದಾಯ ಸಚಿವರು